13ರಿಂದ ನಾಲ್ಕು ದಿನ ನಡೆಯಲಿದೆ ಮೇಳ | ಐದು ಹೊಸ ತಳಿ ಅಭಿವೃದ್ಧಿ | ತಜ್ಞರಿಂದ ಸಿಗಲಿದೆ ಭರಪೂರ ಮಾಹಿತಿ

ಕೃಷಿ ಮೇಳಕ್ಕೆ ದಿನಗಣನೆ, ಜಿಕೆವಿಕೆಯಲ್ಲಿ ಭರದ ಸಿದ್ಧತೆ

■ ವಿಕ ಸುದ್ದಿಲೋಕ ಬೆಂಗಳೂರು

ಜಿಕೆವಿಕೆ ಆವರಣದಲ್ಲಿ ನಡೆಯಲಿರುವ ಕೃಷಿ ಮೇಳಕ್ಕೆ ದಿನಗಣನೆ ಆರಂಭವಾಗಿದ್ದು, ಈ ಬಾರಿ ಹಲವು ವಿಶೇಷಗಳೊಂದಿಗೆ ರೈತರು ಮತ್ತು ಸಾರ್ವಜನಿಕರನ್ನು ಸೆಳೆಯಲು ಭರದ ಸಿದ್ಧತೆಗಳು ನಡೆದಿವೆ.

'ಸಮೃದ್ಧ ಕೃಷಿ ವಿಕಸಿತ ಭಾರತ-ನೆಲ, ಜಲ, ಬೆಳೆ' ಎಂಬ ಘೋಷವಾಕ್ಯದಡಿ ಕೃಷಿ ಮೇಳ ನಡೆಯಲಿದೆ. ಬಹೂಪಯೋಗಿ ಆಕರ್ಷಕ ಮತ್ತು ದುಬಾರಿ ಬೆಲೆಯ ಜಾನುವಾರುಗಳು, ವಿನೂತನ ತಳಿಗಳು, ಸಣ್ಣ ಮತ್ತು ಬೃಹತ್ ಯಂತ್ರೋಪಕರಣಗಳು ಮೇಳಕ್ಕೆ ಬರಲು ಸಜ್ಜಾಗಿವೆ. ನ.13ರಿಂದ ನಾಲ್ಕು ದಿನಗಳ ಕಾಲ ವಿಶ್ವವಿದ್ಯಾಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)ದ ಆವರಣದಲ್ಲಿ ಮೇಳ ನಡೆಯಲಿದೆ.



V-karnataka pg 13

ಈ ಬಾರಿ ಸೂರ್ಯಕಾಂತಿ, ಮೇವಿನ ಜೋಳ, ಅರಿಶಿಣ, ಹರಳು ಸೇರಿದಂತೆ ಐದು ಹೊಸ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ಬೆಳೆಗಳನ್ನು ತಾಕುಗಳಲ್ಲಿ ಬೆಳೆಸಲಾಗಿದೆ. ಜತೆಗೆ, ಹಲವು ಕೃಷಿ ಬೆಳೆಗಳು ಹೂ-ಕಾಯಿ, ತೆನೆಗಳಿಂದ ನಳನಳಿಸುತ್ತಿವೆ. ಹುಚ್ಚೆಳ್ಳು, ಸಿರಿಧಾನ್ಯಗಳು, ಏರೋಬಿಕ್ ಭತ್ತ, ಅವರೆ, ಮುಸುಕಿನ ಜೋಳ, ಹರಳು, ತರಕಾರಿ ಸೊಪ್ಪು ಹೀಗೆ ಹಲವು ಬೆಳೆಗಳ ಪ್ರಾತ್ಯಕ್ಷಿಕೆಗಳನ್ನು ಕಣ್ತುಂಬಿಕೊಳ್ಳಬಹುದು.

''ಸುಧಾರಿತ ಕೃಷಿ ಪದ್ಧತಿಗಳು, ನೂತನ ತಳಿಗಳು, ಜೈವಿಕ ಹಾಗೂ ನವೀಕರಿಸಲ್ಪಡುವ ಇಂಧನ, ಮಣ್ಣುರಹಿತ ಕೃಷಿ, ಔಷಧೀಯ ಮತ್ತು ಸುಗಂಧದ್ರವ್ಯ ಸಸ್ಯಗಳು, ಜಲಾನಯನ ನಿರ್ವಹಣೆ, ಸಾವಯವ ಕೃಷಿ, ಸಮಗ್ರ ಬೇಸಾಯ ಪದ್ಧತಿಗಳು, ರೇಷ್ಮೆ ಕೃಷಿ, ತೋಟಗಾರಿಕೆ ಬೆಳೆಗಳು, ಸಿರಿಧಾನ್ಯಗಳು, ಕೀಟ ಹತೋಟಿ, ಪೋಷಕಾಂಶಗಳ ನಿರ್ವಹಣೆ, ಮಾರುಕಟ್ಟೆ ನೈಪುಣ್ಯತೆ, ಮಣ್ಣು ಪರೀಕ್ಷೆ, ಹನಿ ಮತ್ತು ತುಂತುರು ನೀರಾವರಿ, ಮಳೆ ನೀರಿನ ಕೊಯ್ಲು, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ಕೃಷಿ ಯಂತ್ರೋಪಕರಣಗಳು, ಪಶು ಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆ, ಮೀನು ಸಾಕಾಣಿಕೆ, ಕೃಷಿ ಪ್ರವಾಸೋದ್ಯಮ, ರೈತರಿಗಾಗಿ ರೈತರಿಂದ ಚರ್ಚೆ ಹಾಗೂ ರೈತರಿಗೆ ತಜ್ಞರಿಂದ ಸಲಹೆಯಂತಹ ಹಲವು ಬಗೆಯ ಆಕರ್ಷಣೆಗಳು, ಪ್ರಾತ್ಯಕ್ಷಿಕೆಗಳು ಹಾಗೂ ಮಾಹಿತಿಯು ಕೃಷಿ ಮೇಳದಲ್ಲಿ ಲಭ್ಯವಿರಲಿದೆ,'' ಎಂದು ಕೃಷಿ ವಿವಿ ಸಹ ವಿಸ್ತರಣಾ ನಿರ್ದೇಶಕ ಡಾ. ಕೆ.ಪಿ. ರಘುಪ್ರಸಾದ್ ತಿಳಿಸಿದರು.

ಜೋಳ, ಸೂರ್ಯಕಾಂತಿ

ಹೆಚ್ಚು ಇಳುವರಿ ನೀಡುವ ಜೋಳ, ಸೂರ್ಯಕಾಂತಿಯ ತಳಿಗಳನ್ನೂ ಕೃಷಿ ವಿವಿ ಸಂಶೋಧಿಸಿದೆ. ಮಧ್ಯಮ ಎತ್ತರದ ಮಧ್ಯಮಾವಧಿಯ ಜೋಳದ ಸಿವಿಎಸ್ ಜೆವಿಎಸ್-1 ತಳಿಯನ್ನು ಸಂಶೋಧಿಸಿದ್ದು, 100 ರಿಂದ 105 ದಿನಗಳಲ್ಲಿ ಕಟಾವಿಗೆ ಬರಲಿದೆ. 84 ರಿಂದ 86 ದಿನಗಳಲ್ಲಿ ಕಟಾವಿಗೆ ಬರುವ ಸೂರ್ಯಕಾಂತಿಯ ಕೆಬಿವಿಎಸ್ಎಚ್-88 ತಳಿಯನ್ನು ಲೋಕಾರ್ಪಣೆ ಮಾಡುತ್ತಿದ್ದು, ಹೆಕ್ಟೇರ್‌ಗೆ 22 ರಿಂದ 24 ಕ್ವಿಂಟಾಲ್ ಇಳುವರಿ ಬರಲಿದ್ದು, ಎಣ್ಣೆಯೂ ಅಧಿಕವಾಗಿ ಬರಲಿದೆ ಎಂದು ಕೃಷಿ ವಿವಿ ತಿಳಿಸಿದೆ.

ಹೊಸ ತಳಿಗಳು

ಒಣ ಬೇಸಾಯಕ್ಕೆ ಸೂಕ್ತವಾದ ಅಧಿಕ ಇಳುವರಿ ನೀಡುವ ಬಿಸಿಎಚ್-162 ಹರಳು ತಳಿಯನ್ನೂ ವಿವಿ ಸಂಶೋಧಿಸಿದೆ. ಹೆಕ್ಟೇರ್‌ಗೆ 15 ರಿಂದ 20 ಕ್ವಿಂಟಾಲ್ ಇಳುವರಿ ನೀಡಲಿದ್ದು, ಶೇ.47 ರಿಂದ 48 ರಷ್ಟು ಎಣ್ಣೆ ಅಂಶ ಹೊಂದಿದೆ. ಪ್ರಥಮ ಗೊಂಚಲು ಮೂಗಲು ಸುಮಾರು 95 ದಿನಗಳನ್ನು ತೆಗೆದುಕೊಳ್ಳುತ್ತದೆ. ಈ ಹಿಂದಿನ ಬಿಸಿಎಚ್-66 ತಳಿಯು ಎಕರೆಗೆ 5 ರಿಂದ 6 ಕ್ವಿಂಟಾಲ್ ಇಳುವರಿ ನೀಡುತ್ತಿತ್ತು. ಆದರೆ, ಬಿಸಿಎಚ್-162 ಹರಳು ತಳಿಯು ಎಕರೆಗೆ 6 ರಿಂದ 8 ಕ್ವಿಂಟಾಲ್ ಇಳುವರಿ ನೀಡಲಿದೆ. ಹೀಗಾಗಿ, ನೀರಾವರಿ ವ್ಯವಸ್ಥೆಯಿಲ್ಲದ ರೈತರು ಹರಳು ಬೆಳೆಯಬಹುದು.

ಔಷಧೀಯ ಗುಣದ ಅರಿಶಿಣ: ಕಪ್ಪು ಅರಿಶಿಣದ ಸಿಎಚ್ಎನ್‌ಬಿಟಿ-1 ತಳಿಯು ಔಷಧೀಯ ಗುಣಗಳನ್ನು ಒಳಗೊಂಡಿದೆ. ನೀಲಿ ತಿರುಳನ್ನು ಹೊಂದಿರುವುದು ಇದರ ವಿಶೇಷವಾಗಿದೆ. ಕೃಷಿ ಮೇಳದಲ್ಲಿ ಈ ತಳಿಗಳು ನೋಡುಗರನ್ನು ಸೆಳೆಯಲಿವೆ. ಮಣ್ಣು ರಹಿತ ಕೃಷಿ, ಸಾವಯವ ಕೃಷಿಗಳು ವಿಶೇಷವಾಗಿ ಗಮನಸೆಳೆಯಲಿವೆ.

Mushroom cultivation up amid challenges

Sanjay.Murty@timesofindia.com

Bengaluru: The cultivation and marketing of mushrooms in and around Bengaluru is growing. However, it lags compared to other states largely due to a delayed start in mushroom cultivation in Karnataka and a lack of organised markets.

Senior scientist at Indian Institute of Horticultural Sciences, Chandrashekara C, said several major mushroom cultivation units have come up around Bengaluru, in places like Dabaspet, Nelamangala, Bidadi and Malur. "However, these are of 1-2 tonne daily capacity, unlike the units in states which are major producers. A single producer from Pune ships about 20 tonnes of mushrooms every day to Bengaluru," he added.

Even as the demand for mushrooms in Bengaluru is growing, it is mostly being met by supply from neighbouring states, including Maharashtra and Tamil Nadu. Chandrashekara added the lack of organised markets, like those for vegetables, is a challenge. "The short shelf life of mushrooms is another challenge, as is the lack of awareness and widespread consumption patterns in Karnataka as well as in India," he said.

The University of Agricultural Sciences Bengaluru (UAS-B), along with industry leaders, organised India Mushroom Summit in Bengaluru on Monday and Tuesday, focusing on cultivation techniques, research, value addition, market creation and other aspects of cultivation.

At the summit, UAS-B vice-chancellor SV Suresha hailed mushrooms as an important means to enhance nutrient security in India. "With a good amount of proteins, vitamins, minerals, and minimal fat content, mushrooms have immense potential in addressing nutrient insecurity. We need more programmes to enhance mushroom cultivation in India," he said.



ALL EYES ON FUNGI

Visitors examine different varieties of fresh mushroom samples at the India Mushroom Summit held at the University of Agricultural Sciences, Vignana Kendra | NAGARAJA GADEKAL

Ind Exp pg 12

Times of Ind pg 02

Vijayavani pg 06

ವಿ ರೈತ ಮಿತ್ರ



■ ಶುಂಠಿ ಬಿತ್ತನೆ ಗಡ್ಡೆಗಳನ್ನು ದಾಸ್ತಾನು ಮಾಡುವುದು ಹೇಗೆ?

| ಸುಧಾಕರ್ ಬೆಳಗಾವಿ

ಶುಂಠಿ ಬಹುವಾರ್ಷಿಕವಾಗಿ ಬೆಳೆಯುವ ಮೂಲಿಕೆಯಾಗಿದೆ. ಇದರ ಗಡ್ಡೆಗಳನ್ನು ಸಾಂಬಾರು ಪದಾರ್ಥವಾಗಿ ಬಳಸುತ್ತಾರೆ. ಮುಂದಿನ ಬೆಳೆಗೆ ಉತ್ತಮ ಮೊಳಕೆ ಪ್ರಮಾಣ ಪಡೆಯಲು ಬಿತ್ತನೆ ಗಡ್ಡೆಗಳನ್ನು ಜೋಪಾನವಾಗಿ ಸಂಗ್ರಹ ಮಾಡಬೇಕು. ಬಿತ್ತನೆಗಾಗಿ ರೋಗರಹಿತ ಗಿಡಗಳಿಂದ ದಪ್ಪನೆಯ, ಆರೋಗ್ಯವಾದ ಗಡ್ಡೆಗಳನ್ನು ಕೊಯ್ಲು ಮಾಡಿದ ತಕ್ಷಣ ಆಯ್ಕೆ ಮಾಡಿಕೊಳ್ಳಬೇಕು. ಕೊಯ್ಲಿನ ನಂತರ ಬಿತ್ತನೆ ಗಡ್ಡೆಗಳನ್ನು ಶೇ.0.075ರ ಕ್ವಿನಾಲ್‌ಫಾಸ್ ಮತ್ತು ಶೇ. 0.3ರ ಮ್ಯಾಂಕೋಜೆಬ್ ದ್ರಾವಣದಲ್ಲಿ 30 ನಿಮಿಷಗಳ ಕಾಲ ಉಪಚರಿಸಿ ನೆರಳಿನಲ್ಲಿ ಒಣಗಿಸಬೇಕು. ಬಿತ್ತನೆ ಗಡ್ಡೆಗಳನ್ನು ನೆರಳಿನಲ್ಲಿ ಅನುಕೂಲಕರ ಅಳತೆಯ ಗುಣಿಗಳಲ್ಲಿ ಸಂಗ್ರಹಣೆ ಮಾಡಬೇಕು. ಗುಣಿಗಳ ಒಳಗೋಡೆಯನ್ನು ಸಗಣಿಯ ರಾಡಿಯಿಂದ ಬಳಿಸಬೇಕು. ಗುಣಿಗಳಲ್ಲಿ ಗಡ್ಡೆಗಳನ್ನು ಪದರ ಪದರವಾಗಿ ಚೆನ್ನಾಗಿ ಒಣಗಿದ ಮರಳು/ಮರದ ಪುಡಿಯೊಂದಿಗೆ ಶೇಕರಿಸುವುದು ಸೂಕ್ತ.

| ಡಾ. ಕೆ.ಪಿ. ರಘುಪ್ರಸಾದ್ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 1800425057 1/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

UNIVERSITY OF AGRICULTURAL SCIENCES, BENGALURU

Estate Office, GKVK

TENDER NOTIFICATION NO.EO/TN/17/2025-26
DATED: 31-10-2025

TENDER NOTIFICATION

(Through e-procurement portal only)

Tenders are invited through e-Procurement from **Eligible Architects** registered in the council of Architects as per Standard Tender Document KC6 in two cover system for the Sl. No.1. The details of the notification, schedule, specifications are available in the website **www.kppp.karnataka.gov.in.** The cost of tender document is as per e-procurement portal.

The two cover system consists of technical proposal and financial proposal. The Architect should upload the following document to become eligible- 1) Architect Registration Certificate; 2) GST Certificate & GST Paid details of last 3 years; 3) General experience of Architects; 4) Similar nature of work done certificate; 5) Turnover statement of last 3 years; 6) Man power details like resumes and experience to handle the projects.

Blank Tender Documents can be down loaded from **www.kppp.karnataka.gov.in.** The Pre-bid meeting will be held on **19.11.2025 at 10.30 AM.** Last date and time for uploading the tender through e-Procurement is **21.11.2025 upto 4.00 p.m**. The Technical bid will be opened on **24.11.2025 at 10.30 a.m.** Financial bid will be opened on **27.11.2025 at 10.30 a.m.** For more details please contact e-portal help desk at **support@eprochelpdesk.com** or **9240214000/01** on working days and this office during working hour, Phone No.080-23332765

Sd/-
ESTATE OFFICER

DIPR/CP/3579/CCL/2025-26

Dec Hrd Pg 07

Inspired by coffee rings, scientists discover low-cost method to detect toxic dyes in food

TIMES NEWS NETWORK

Bengaluru: A team of scientists at Raman Research Institute (RRI) has discovered a simple and effective way to detect toxic dyes such as Rhodamine B, by using the same everyday phenomenon that causes coffee stains on a table.

When a drop of coffee dries, it leaves a dark ring around the edges. This happens because as the liquid evaporates, tiny particles inside it move outward and settle along the rim. Scientists call this the "coffee-stain effect".

MARVELS OF SCIENCE

The RRI team realised this effect could be used in the lab to detect harmful chemicals that are otherwise too small to measure.

In their study, the researchers focused on Rhodamine B, a bright pink fluorescent dye used in textiles and cosmetics but banned in food products because it can damage the skin, eyes and respiratory system. It also poses environmental risks as it can persist in water for a long time.

To detect the dye, the team mixed gold nanorods — microscopic rods only a few nanometres long — with water and placed a drop of this mixture on a clean silicon surface. As the drop evaporated, the nanorods were carried to the edge of the ring and formed a thin layer. When the concentration of nanorods was high, they packed tightly together, creating many "hot spots" where light became strongly amplified.

When a laser was shone on these rings, even extremely tiny amounts of Rhodamine B produced a bright signal. The denser the ring, the stronger the signal. The researchers were able to detect the dye at concentrations as low as one part per trillion—comparable to a single drop of dye in a large swimming pool.

"This technique is simple and inexpensive. The dried pattern itself concentrates the nanoparticles, allowing us to detect even minute quantities of toxins. Handheld Raman spectrometers could easily be used for this," Prof Ranjini Bandyopadhyay from the Soft Condensed Matter group at RRI, said.

According to the team, this method could help regulators monitor banned dyes and other harmful chemicals in food, cosmetics and water, where such substances are often found in very small quantities that traditional equipment cannot detect. The study, which shows a phenomenon as common as a coffee ring, could inspire new tools for public health and environmental safety, has been published in a peer-reviewed journal.

IISc team boosts pesticide efficiency

TIMES NEWS NETWORK



Pic for representation

Bengaluru: When farmers spray pesticides on crops, much of them never stick to the leaves. Because most plants have waxy and water-repellent surfaces, water droplets either roll away or bounce off. This not only reduces the effect of pesticides but also leads to soil and water contamination. Scientists at Indian Institute of Science (IISc) have now found a way to make pesticide sprays stick better using what they call "liquid marbles".

Liquid marbles (LMs) are tiny water droplets covered by a thin layer of hydrophobic particles. This coating keeps the droplets from spreading or evaporating too quickly. The idea was first used in laboratories for chemical and biochemical experiments, but a team at IISc's Centre for Nano Science and Engineering (CeNSE) saw a new use for it in agriculture.

The group was led by Prosenjit Sen, associate professor at CeNSE, and included Rutvik Lathia, a former PhD student who is now at Max Planck Institute for Polymer Research. "Around 50% of the pesticides are wasted because droplets bounce off leaves. Our method allows more of the pesticide to stay on the plant," said Lathia.

Liquid marbles are tiny water droplets covered by a thin layer of hydrophobic particles. This coating keeps the droplets from spreading or evaporating too quickly

The team made LMs by rolling small droplets of water over beds of hydrophobic particles. They first tried materials such as glass beads and Teflon, but those were harmful to plants. So, they turned to organic alternatives such as lycopodium, a plant-based powder, and zein, a protein found in corn. These biodegradable materials were found to be safe and more effective. The team tested LMs on rose leaves coated with Teflon to mimic natural waxy surfaces. High-speed imaging showed the marbles stuck well and lost more energy on impact.

The next step, Sen said, is to make the process cheaper and scalable. "We need to develop a mechanism to create large numbers of LMs during pesticide spraying." The study was published in the Journal of Colloid and Interface Science.

Times of Ind Pg 04

ಕರುನಾಡ ಕಾಫಿ ವಿಶ್ವದಲ್ಲೇ ಪ್ರಸಿದ್ಧ

■ ಸುನಿಲ್ ಪೊನ್ನೇಟಿ ಮಡಿಕೇರಿ

ಕರುನಾಡಿನ ಕಾಫಿಯ ಕಂಪು ಈಗ ಇಡೀ ಜಗತ್ತಿನಲ್ಲೇ ಸುಪ್ರಸಿದ್ಧವಾಗಿದೆ. ಕರ್ನಾಟಕದಲ್ಲಿ ಪ್ರಮುಖವಾಗಿ ಅರೇಬಿಕಾ ಮತ್ತು ರೋಬಸ್ಟಾ ಎನ್ನುವ ಎರಡು ಪ್ರಮುಖ ತಳಿಗಳನ್ನು ಬೆಳೆಯಲಾಗುತ್ತದೆ. ಅರೇಬಿಕಾ ಕಾಫಿಯು ಹೆಚ್ಚು ಸುವಾಸನೆ, ಸೂಕ್ಷ್ಮವಾದ ರುಚಿ ಮತ್ತು ಕಡಿಮೆ ಕೆಫೀನ್ ಅಂಶ ಹೊಂದಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಇದನ್ನು ಉತ್ತಮ ಗುಣಮಟ್ಟದ ಕಾಫಿ ಎಂದು ಪರಿಗಣಿಸಲಾಗುತ್ತದೆ. ಈ ತಳಿಯ ಕಾಫಿಗೆ ಬೆಲೆಯೂ ಹೆಚ್ಚು. ಸಾಮಾನ್ಯವಾಗಿ ಎತ್ತರದ ಪ್ರದೇಶದಲ್ಲಿ ಅರೇಬಿಕಾ ಕಾಫಿ ಬೆಳೆಯಲಾಗುತ್ತದೆ. ನಮ್ಮಲ್ಲಿ ಕಾಫಿಯನ್ನು ಮರಗಳ ನೆರಳಿನಲ್ಲಿ ಬೆಳೆತ್ತಿರುವುದು ವಿಶೇಷ. ರೋಬಸ್ಟಾ ಕಾಫಿ ಹೆಚ್ಚು ಕೆಫೀನ್ ಅಂಶವನ್ನು ಹೊಂದಿದ್ದು, ಒರಟು ರುಚಿ ಹೊಂದಿರುತ್ತದೆ. ಈ ತಳಿಯ ಕಾಫಿಯು ಹೆಚ್ಚಿನ ರೋಗ ನಿರೋಧಕ ಶಕ್ತಿ ಹೊಂದಿರುತ್ತದೆ. ಕೀಟಮುಕ್ತ, ರೋಗಮುಕ್ತವಾಗಿ ಹೆಚ್ಚಿನ ಇಳುವರಿಯೂ ಬರುತ್ತದೆ.

ಭಾರತದಲ್ಲಿ ಬೆಳೆಯುವ ಒಟ್ಟಾರೆ ಕಾಫಿಯ ಪೈಕಿ ಶೇ. 71ರಷ್ಟು ಕಾಫಿಯನ್ನು ಕರ್ನಾಟಕದಲ್ಲಿಯೇ ಬೆಳೆಯಲಾಗುತ್ತದೆ. ರಾಜ್ಯದಲ್ಲಿ 10 ಹೆಕ್ಟೇರ್‌ಗಿಂತ ಕಡಿಮೆ ತೋಟ ಹೊಂದಿರುವ 77,613 ಬೆಳೆಗಾರರಿದ್ದು, 10 ಹೆಕ್ಟೇರ್ ಮೇಲ್ಪಟ್ಟು ವಿಸ್ತೀರ್ಣದ ತೋಟ ಹೊಂದಿರುವ 2,242 ಬೆಳೆಗಾರರು ಇದ್ದಾರೆ. 2024-25ರ ಅಂಕಿಅಂಶಗಳ ಪ್ರಕಾರ ಚಿಕ್ಕಮಗಳೂರಿನಲ್ಲಿ 91,400 ಮೆಟ್ರಿಕ್ ಟನ್, ಕೊಡಗಿನಲ್ಲಿ 1,21,600 ಮೆಟ್ರಿಕ್ ಟನ್ ಹಾಗೂ ಹಾಸನದಲ್ಲಿ 43 ಸಾವಿರ ಮೆಟ್ರಿಕ್ ಟನ್ ಸೇರಿದಂತೆ ಒಟ್ಟು 2,56,000 ಟನ್ ಕಾಫಿ ಬೆಳೆಯಲಾಗಿದೆ. ಈ ಮೂರು ಜಿಲ್ಲೆಗಳಿಂದ ಕಾಫಿ ಮೂಲಕ 10 ಸಾವಿರ ಕೋಟಿ ರೂ. ವಿದೇಶಿ ವಿನಿಮಯ ಬರುತ್ತಿದೆ. ಉಳಿದಂತೆ ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಮೈಸೂರು ಜಿಲ್ಲೆಗಳಿಂದಲೂ ಕಾಫಿಯ ಕೊಡುಗೆ ಇದೆ. ಇದನ್ನು ಇತರೆಡೆಗಳಿಗೂ ವಿಸ್ತರಿಸುವ ಚಿಂತನೆಯನ್ನು ಭಾರತೀಯ ಕಾಫಿ ಮಂಡಳಿ ಇಟ್ಟುಕೊಂಡಿದೆ. ಈ ನಿಟ್ಟಿನಲ್ಲಿ ಬೇರೆ ಬೇರೆ ಹವಾಮಾನ, ಭೌಗೋಳಿಕ ಸ್ಥಿತಿಯಲ್ಲಿ ಬೆಳೆಯಬಹುದಾದ ಕಾಫಿ ತಂತ್ರಜ್ಞಾನವನ್ನು ಸದ್ಯದಲ್ಲೇ ಬಿಡುಗಡೆ ಮಾಡಲಿದೆ.

2047ಕ್ಕೆ ದೇಶದಲ್ಲಿ 7 ಲಕ್ಷ ಟನ್ ಕಾಫಿ ಬೆಳೆಯುವ ಗುರಿಯನ್ನು ಭಾರತೀಯ ಕಾಫಿ ಮಂಡಳಿ ಇಟ್ಟುಕೊಂಡಿದೆ. ಇದರಲ್ಲಿ ಕರ್ನಾಟಕದ ಪಾಲು ಕೂಡ ಇದ್ದು, ಇದಕ್ಕೆ ಬೇಕಾದ ಸಿದ್ಧತೆ ನಡೆದಿದೆ. 2047ರ ಒಳಗೆ ಕಾಫಿ ರಫ್ತಿನಿಂದ 50 ಸಾವಿರ ಕೋಟಿ ರೂ. ಆದಾಯ ತಂದುಕೊಡುವ ಗುರಿ ಕಾಫಿ ಮಂಡಳಿಯದು.



ಕೊಯ್ಲಿಗೆ ಸಿದ್ಧವಾಗಿರುವ ಕಾಫಿ ಹಣ್ಣು





ಅರೇಬಿಕಾ ಮತ್ತು ರೋಬಸ್ಟಾ ತಳಿಯ ಕಾಫಿ.

ಕರ್ನಾಟಕದ್ದೂ ಸೇರಿದಂತೆ ಭಾರತೀಯ ಕಾಫಿ ಹೆಚ್ಚು ರಫ್ತಾಗುವುದು ಯೂರೋಪಿಯನ್ ರಾಷ್ಟ್ರಗಳಿಗೆ. ಇಟಲಿಯೇ ಕರ್ನಾಟಕದ ಕಾಫಿಗೆ ಅತಿದೊಡ್ಡ ರಫ್ತು ಮಾರುಕಟ್ಟೆ. ಹೆಚ್ಚು ಕಹಿಕಹಿ ಎನಿಸುವ ರೋಬಸ್ಟಾ ತಳಿಯನ್ನು ಇಟಲಿ ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತದೆ. ನಮ್ಮ ಕಾಫಿಯ 2ನೇ ಅತಿದೊಡ್ಡ ಮಾರುಕಟ್ಟೆ ಜರ್ಮನಿ. ರೋಬಸ್ಟಾ ಮತ್ತು ಗುಣಮಟ್ಟದ ಅರೇಬಿಕಾ ಎರಡನ್ನೂ ಈ ದೇಶ ಆಮದು ಮಾಡಿಕೊಳ್ಳುತ್ತದೆ. ರಷ್ಯಾ ಕೂಡ ಭಾರತೀಯ ಕಾಫಿಯ ಒಂದು ಪ್ರಮುಖ ಮಾರುಕಟ್ಟೆಯಾಗಿದೆ. ಅಲ್ಲಿ ಇನ್‌ಸ್ಟಂಟ್ ಕಾಫಿಗೆ ಹೆಚ್ಚು ಬೇಡಿಕೆಯಿದೆ. ಬೆಲ್ಜಿಯಂ, ಸ್ಪೇನ್ ಕೂಡ ಕಾಫಿ ಆಮದು ಮಾಡಿಕೊಳ್ಳುತ್ತವೆ. ಯುಎಇ, ಜೋರ್ಡಾನ್, ಯುಎಸ್‌ಎ, ಸ್ವಿಜರ್ಲೆಂಡ್‌ಗೆ ಹೆಚ್ಚಿನ ಪ್ರಮಾಣದಲ್ಲಿ ಅರೇಬಿಕಾ ಕಾಫಿ ಆಮದು ಮಾಡಿ ಕೊಳ್ಳುತ್ತವೆ. ಭಾರತೀಯ ಕಾಫಿ ರಫ್ತಿನಲ್ಲಿ ರೋಬಸ್ಟಾ ತಳಿಯ ಪಾಲು ಶೇ. 70ಕ್ಕಿಂತ ಹೆಚ್ಚು ಇದ್ದು ಈ ತಳಿಯನ್ನು ದೇಶದಲ್ಲೇ ಕೊಡಗು ಜಿಲ್ಲೆಯಲ್ಲಿ ಹೆಚ್ಚು ಬೆಳೆಯುವುದು ವಿಶೇಷ.





Vijayavani Pg 09

ವಿದೇಶದಲ್ಲೂ ದರ ಕುಸಿತ | ಬೆಳೆಗಾರರಿಗೆ ಆರ್ಥಿಕ ನಷ್ಟ

ಮೆಕ್ಕೆಜೋಳ ದೇಸಿ ಮಾರ್ಕೆಟ್‌ಗೆ ಸೀಮಿತ

■ ರವಿರಾಜ್ ಆರ್.ಗಲಗಲಿ
ಬಾಗಲಕೋಟೆ
raviraj.galagali@timesofindia.com

ಭರಪೂರ ಮೆಕ್ಕೆಜೋಳ ಬೆಳೆದು ರಫ್ತು ಮಾಡುತ್ತಿದ್ದ ರೈತರಿಗೆ ವಿದೇಶದಲ್ಲಿ ದರ ಕುಸಿದ ಕಾರಣ ದೇಸಿ ಮಾರುಕಟ್ಟೆಯಲ್ಲೇ ಕಡಿಮೆ ಬೆಲೆಗೆ ಮೆಕ್ಕೆಜೋಳ ಮಾರುವ ಸ್ಥಿತಿ ಎದುರಾಗಿದೆ.

ಮೂರು ವರ್ಷಗಳಿಂದ ಜಿಲ್ಲೆಯಿಂದ ಮೆಕ್ಕೆಜೋಳ ರಫ್ತು ಸ್ಥಗಿತಗೊಂಡಿದೆ. ಈ ಮಧ್ಯೆ ಭಾರಿ ಬೆಳೆ ಬೆಳೆದರೂ ಬೇಡಿಕೆ ಇಲ್ಲದೆ ದರ ಕುಸಿದಿದೆ. ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಜೋಳ ಮಾರಾಟವಾಗುತ್ತಿದೆ.

ಕಳೆದ ಮೂರು ವರ್ಷಗಳಿಂದ ವಿದೇಶದಲ್ಲಿ ಮೆಕ್ಕೆಜೋಳದ ದರ ಭಾರತಕ್ಕಿಂತ ಕಡಿಮೆ ಇದೆ. ಹೀಗಾಗಿ ಮೆಕ್ಕೆಜೋಳ ರಫ್ತು ಮಾಡಲು ವ್ಯಾಪಾರಸ್ಥರು ಹಿಂದೇಟು ಹಾಕುತ್ತಿದ್ದಾರೆ. ಈ ಮೊದಲು ತೈವಾನ್, ಬಾಂಗ್ಲಾದೇಶ, ಇಂಡೋನೇಷ್ಯಾ ಸೇರಿ ನಾನಾ ರಾಷ್ಟ್ರಗಳಿಗೆ ಬಾಗಲಕೋಟೆಯಿಂದ ಮೆಕ್ಕೆಜೋಳ ರಫ್ತು ಮಾಡಲಾಗುತ್ತಿತ್ತು. ವಿಜಯಪುರ, ಗದಗ ಜಿಲ್ಲೆಗಳ ಮೆಕ್ಕೆಜೋಳವೂ ಬಾಗಲಕೋಟೆ ಮೂಲಕ ವಿದೇಶ ತಲುಪುತ್ತಿತ್ತು. ಸದ್ಯ ಬಾಗಲಕೋಟೆ ಜಿಲ್ಲೆಯ ರೈತರಿಂದ ಮೆಕ್ಕೆಜೋಳ ಖರೀದಿ ಸುವ ಸಗಟು ತಮಿಳುನಾಡಿಗೆ ಖರೀದಿದಾರರು, ಕಳುಹಿಸುತ್ತಿದ್ದಾರೆ.



ಬಾಗಲಕೋಟೆಯಲ್ಲಿ ರೈಲು ಬೋಗಿಯಲ್ಲಿ ಮೆಕ್ಕೆಜೋಳ ತುಂಬುತ್ತಿರುವ ಕಾರ್ಮಿಕರು.

ಕೇಂದ್ರ ಸರಕಾರ ಮೆಕ್ಕೆಜೋಳ ಬೆಳೆಯುವ ರೈತರ ನೆರವಿಗೆ ಧಾವಿಸಿ ಬೆಂಬಲ ಬೆಲೆ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಈ ಕ್ರಮದಿಂದ ರೈತರ ಹಾನಿ ಕಡಿಮೆಗೊಳಿಸಬಹುದು.
-ಮುರುಗೇಶ ನಾಗರಾಳ ವ್ಯಾಪಾರಸ್ಥ

ಹಲವು ಉತ್ಪನ್ನ ತಯಾರಿಕೆ

ಮೆಕ್ಕೆಜೋಳದಿಂದ 12ಕ್ಕೂ ಹೆಚ್ಚು ಉಪ ಉತ್ಪನ್ನ ತಯಾರಿಸಲಾಗುತ್ತದೆ. ಸ್ಟಾರ್ಚ್, ಬಿಸ್ಕತ್, ಪಶು ಆಹಾರ ಸೇರಿ ನಾನಾ ಉತ್ಪನ್ನಗಳಿಗೆ ಮೆಕ್ಕೆಜೋಳ ಮೂಲ.

ಈವರೆಗೆ ನಾಲ್ಕು ರೈಲುಗಳಲ್ಲಿ 11 ಸಾವಿರ ಮೆಟ್ರಿಕ್ ಟನ್ ಜೋಳ ಸಾಗಣೆಯಾಗಿದೆ.

ಉತ್ಪಾದನೆಗೆ ಕಡಿವಾಣ: ಆತ್ಯಧಿಕ ಮೆಕ್ಕೆಜೋಳ ಬೆಳೆದಿರುವುದು ಹಾಗೂ ಎಥೆನಾಲ್ ಕಾರ್ಖಾನೆಗಳಿಗೆ ಸೀಮಿತ ಉತ್ಪಾದನೆಗೆ ಅವಕಾಶ ನೀಡಿರುವುದು ದರ ಕುಸಿಯಲು ಕಾರಣ. ಮೆಕ್ಕೆಜೋಳದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ 2,400 ರೂ.ಇದೆ. ಆದರೆ, ಖರೀದಿ ಕೇಂದ್ರ ತೆರೆದಿಲ್ಲ. ಹೀಗಾಗಿ 1,850-1,900 ರೂ. ವರೆಗೆ ಮಾರಾಟವಾಗುತ್ತಿದೆ. ಜಿಲ್ಲೆಯಲ್ಲಿ ಈ ವರ್ಷ 85 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗಿದೆ. ಕಳೆದ ವರ್ಷ 53 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಲಾಗಿತ್ತು. ಕೇಂದ್ರ ಸರಕಾರ ಎಥೆನಾಲ್ ಉತ್ಪಾದಿಸುವ ಕಾರ್ಖಾನೆಗಳಿಗೆ ಸೀಮಿತ ಉತ್ಪಾದನೆಗೆ ಅವಕಾಶ ಕಲ್ಪಿಸಿದೆ. ಸರಕಾರ ಕಾರ್ಖಾನೆಗಳಿಗೆ ಪೂರ್ಣಪ್ರಮಾದ ಎಥೆನಾಲ್ ಉತ್ಪಾದನೆಗೆ ಅವಕಾಶ ಕಲ್ಪಿಸಿದರೆ ಮೆಕ್ಕೆಜೋಳದ ದರ ಹೆಚ್ಚಳವಾಗಲಿದೆ. ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿ ಕೇಂದ್ರಗಳನ್ನು ಸ್ಥಾಪಿಸಿದರೆ ರೈತರಿಗೆ ತಕ್ಕಮಟ್ಟಿಗೆ ಸಹಾಯವಾಗಲಿದೆ.

V-karnataka pg 04

'ಅಡಕೆಯಲ್ಲಿದೆ ಕ್ಯಾನರ್ ಪ್ರತಿಬಂಧಕ ಗುಣ ದೃಢ'



ಮಂಗಳೂರು: ಅಡಕೆಯಲ್ಲಿನ ಸಾರಗಳು ಕಕ್ಷಕಾಲಿ ಕ್ಯಾನ್ಸರ್ ಪ್ರತಿಬಂಧಕ ಗುಣಗಳನ್ನು ಹೊಂದಿವೆ ಎಂಬ ಮಹತ್ವದ ಅಂಶವನ್ನು ತಿಳಿಸಿರುವ ಯೆನೆಪೋಯ ವಿಶ್ವವಿದ್ಯಾಲಯ ಅಡಕೆ ಕುರಿತು ಅಧ್ಯಯನ ವರದಿಯನ್ನು ಕ್ಯಾಂಪ್ಕೊ ಸ್ವಾಗತಿಸಿದೆ.

"ಅಡಕೆಯ ಸಾರಗಳು ಕ್ಯಾನ್ಸರ್ ಕೋಶಗಳ ವೃದ್ಧಿ ಚಲನೆ ಮತ್ತು ಹರಡುವಿಕೆಯನ್ನು ಪರಿಣಾಮಕಾರಿಯಾಗಿ ತಡೆಯುತ್ತವೆ ಹಾಗೂ ಇದು ಸಾಮಾನ್ಯ ಕೋಶಗಳಿಗೆ ಹಾನಿಯನ್ನುಂಟು ಮಾಡುವುದಿಲ್ಲ ಎಂಬುದು ಅಧ್ಯಯನದ ಅಂಶಗಳು. ಸಾಂಪ್ರದಾಯಕವಾಗಿ ಸಂಸ್ಕರಿಸಿದ ಅಡಕೆಯನ್ನು ಬಳಸಿದರೆ ಆರೋಗ್ಯದಾಯಕ ಲಾಭಗಳವೆ ಎಂಬ ಜನಸಾಮಾನ್ಯರ ನಂಬಿಕೆಗೆ ಇವು ವೈಜ್ಞಾನಿಕ ಸಾಕ್ಷ್ಯಾಧಾರವನ್ನು ಒದಗಿಸಿದೆ," ಎಂದು ಕ್ಯಾಂಪ್ಕೊ ಅಧ್ಯಕ್ಷ ಎ.ಕಿಶೋರ್ ಕುಮಾರ್ ಕೊಡ್ಗಿ ಅವರು ಶ್ಲಾಘಿಸಿದ್ದಾರೆ.

"ವಿಶ್ವಆರೋಗ್ಯ ಸಂಸ್ಥೆಯು ಇತ್ತೀಚೆಗೆ ಅಡಕೆಯನ್ನು ಕ್ಯಾನ್ಸರ್‌ಕಾರಕ ಎಂದು ವರ್ಗೀಕರಿಸಿರುವುದು ಕಪ್ಪೋಲಕಲ್ಪಿತ ಎಂಬ ಕ್ಯಾಂಪ್ಕೊದ ಪ್ರತಿಪಾದನೆಗೆ ಈ ಅಧ್ಯಯನ ಪ್ರಬಲವಾದ ಪುರಾವೆ ಆಗಿದೆ. ಈ ರೀತಿಯ ವೈಜ್ಞಾನಿಕ ದೃಢೀಕರಣಗಳು ಲಕ್ಷಾಂತರ ಅಡಕೆ ಬೆಳೆಗಾರರ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಉತ್ಪನ್ನದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ," ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

V-karnataka pg 08

V-karnataka pg 07

ದೀಪಾವಳಿ ನಂತರ ಮಾರುಕಟ್ಟೆಗೆ ಹೊಸ ಅಕ್ಕಿ | ಪೂರೈಕೆ ಏರಿಕೆಯಿಂದ ಧಾರಣೆ ಇಳಿಕೆ

ಬಂಪರ್ ಬೆಳೆ: ಇಳಿದ ಅಕ್ಕಿ ಬೆಲೆ

ಮುಂಬಯಿ: ಈ ವರ್ಷ ಮುಂಗಾರು ಋತುವಿನಲ್ಲಿನ ಆತ್ಯುತ್ತಮ ಇಳುವರಿಯಿಂದಾಗಿ ಅಕ್ಕಿ ಬೆಲೆ ಕಡಿಮೆಯಾಗಿದೆ.

ದೀಪಾವಳಿ ನಂತರ ಹೊಸ ಅಕ್ಕಿ ಮಾರುಕಟ್ಟೆ ಪ್ರವೇಶಿಸುತ್ತದೆ. ಹೀಗಾಗಿ ಈ ಸಲ ಬಾಸ್ಮತಿ ಹಾಗೂ ಬಾಸ್ಮತಿಯೇತರ ಅಕ್ಕಿ ಬೆಲೆ ಶೇ.6ರಷ್ಟು ಇಳಿದಿದೆ. ಗೋವಿಂದೋಭೋಗ್ ಎಂಬ ಸುವಾಸನೆಭರಿತ ಅಕ್ಕಿ ಸೇರಿದಂತೆ ವಿಶೇಷ ತಳಿಯ ಅಕ್ಕಿಗಳ ಧಾರಣೆ ಶೇ.36ರಷ್ಟು ಕುಸಿದಿದೆ. ಬಾಸ್ಮತಿ ಅಕ್ಕಿಯ ಸಾಮಾನ್ಯ ತಳಿ ಪ್ರತಿ ಕೆ.ಜಿಗೆ 85 ರೂ.ಗಳಿಂದ 80 ರೂ.ಗೆ ಇಳಿದಿದೆ.

"ಈ ವರ್ಷ ಹಾಗೂ ಮುಂದಿನ ವರ್ಷ ಮಾರುಕಟ್ಟೆಗೆ ಅಕ್ಕಿ ಪೂರೈಕೆ ಹೆಚ್ಚಿನ ಪ್ರಮಾಣದಲ್ಲಿ ಇರಲಿದೆ. ಇದರಿಂದ ಮಾರುಕಟ್ಟೆ ಸದೃಢವಾಗಿರುತ್ತದೆ. ಹೀಗಾಗಿ ಅಕ್ಕಿ ಬೆಲೆ ನಿಯಂತ್ರಣದಲ್ಲಿರುತ್ತದೆ," ಎಂದು ಮಾರುಕಟ್ಟೆತಜ್ಞರು ಅಭಿಪ್ರಾಯಪಟ್ಟಿದ್ದಾರೆ.



6% ದೀಪಾವಳಿ ನಂತರ ಮಾರುಕಟ್ಟೆಯಲ್ಲಿ ಬಾಸ್ಮತಿ ಮತ್ತು ಬಾಸ್ಮತಿಯೇತರ ಅಕ್ಕಿಗಳ ದರ ಇಳಿಕೆ

36% ಸದ್ಯ ಮಾರುಕಟ್ಟೆಯಲ್ಲಿ ವಿಶೇಷ ತಳಿಗಳ ಅಕ್ಕಿ ಧಾರಣೆಯಲ್ಲಿ ಆಗಿರುವ ಕುಸಿತದ ಪ್ರಮಾಣ

ಅಕ್ಕಿ ಬೆಲೆ ಇಳಿಕೆಗೆ ಕಾರಣ ಏನು?

■ **ಅಧಿಕ ಪೂರೈಕೆ:** ಈ ವರ್ಷದ ಜೂನ್ ನಿಂದಲೂ ಮಾರುಕಟ್ಟೆಗೆ ಅಕ್ಕಿ ಪೂರೈಕೆ ಪ್ರಮಾಣ ಹೆಚ್ಚಿದೆ. ಆದರೆಲ್ಲಿಯೂ ದೀಪಾವಳಿ ನಂತರ ಮುಂಗಾರು ಹಂಗಾಮಿನ ಹೊಸ ಅಕ್ಕಿಯೂ ಮಾರುಕಟ್ಟೆಪ್ರವೇಶಿಸಿತು. ಹೀಗಾಗಿ ದರ ಇಳಿಕೆಯಾಗಿದೆ. ಅಕ್ಕಿ ದರ ಸತತ ಇಳಿಕೆಯು ಹಾದಿಯಲ್ಲಿರುವುದರಿಂದ ಸಗಟು ಹಣದುಬ್ಬರವೂ ಗಣನೀಯವಾಗಿ ಇಳಿಕೆಯಾಗಿದೆ.

■ **ಅಧಿಕ ಕಾಪು ದಾಸ್ತಾನು:** ಕೇಂದ್ರ ಸರಕಾರ ರೈತರಿಂದ ಭತ್ತದ ಎತ್ತುವಳಿಯನ್ನು ಹೆಚ್ಚುಮಾಡಿತ್ತು. ಇದರಿಂದ ಕಾಪು ದಾಸ್ತಾನು ಮಟ್ಟ ಏರಿತು. ಸರಕಾರ ಕೈಗೊಂಡ ಈ ಉಪಕ್ರಮದಿಂದ ಬೆಲೆ ಏರಿಗೆ ತಡೆ ಉಂಟಾಯಿತು.

■ **ಅಮೆರಿಕದ ಪ್ರತಿಸುಂಕ:** ಅಮೆರಿಕದ ಪ್ರತಿಸುಂಕ ಸಮರದಿಂದ ಅಕ್ಕಿ ರಫ್ತು, ವಿಶೇಷವಾಗಿ ಬಾಸ್ಮತಿ ಅಕ್ಕಿ ರಫ್ತಿನ ಪ್ರಮಾಣ ಕುಸಿಯಿತು. ಇದರಿಂದ ದೇಸಿ ಮಾರುಕಟ್ಟೆಯಲ್ಲಿ ಪೂರೈಕೆ ಹೆಚ್ಚಿತು.

■ **ಅಧಿಕ ಇಳುವರಿ:** ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಭತ್ತ ಬಿತ್ತನೆ ಪ್ರದೇಶವು 109.5 ದಶಲಕ್ಷ ಹೆಕ್ಟೇರ್‌ನಿಂದ 110 ದಶಲಕ್ಷ ಹೆಕ್ಟೇರ್‌ಗೆ ವಿಸ್ತರಿಸಿತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ಹಂಗಾಮಿನಲ್ಲಿ ಇಳುವರಿ ಕೂಡ ಉತ್ತಮವಾಗಿದೆ. ಮಾರುಕಟ್ಟೆಗೆ ಪೂರೈಕೆ ಪ್ರಮಾಣ ಹೆಚ್ಚಲು ಇದು ಸಹ ಕಾರಣವಾಗಿದೆ.

ಭತ್ತದ ಬೆಂಬಲ ಬೆಲೆ ಇನ್ನಷ್ಟು ಹೆಚ್ಚಲಿ!

ಮಾರುಕಟ್ಟೆಯಲ್ಲೇ ಹೆಚ್ಚಿನ ದರ | ಎಂಎಸ್‌ಪಿ ಹೆಚ್ಚಿಸಿದರೆ ಮಾರುಕಟ್ಟೆ ಬೆಲೆ ಏರಿಕೆ ನಿರೀಕ್ಷೆ

■ ಯಳನಾಡು ಮಂಜು ದಾವಣಗೆರೆ
manjunath.lokanath@timesofindia.com

ಬೆಂಬಲ ಬೆಲೆಗಿಂತ ಮಾರುಕಟ್ಟೆಯಲ್ಲಿ ಭತ್ತದ ಬೆಲೆ ಹೆಚ್ಚಿರುವುದರಿಂದ ಖರೀದಿ ಕೇಂದ್ರದಲ್ಲಿ ಭತ್ತ ಮಾರಾಟ ಮಾಡಲು ನೋಂದಣಿ ಪ್ರಕ್ರಿಯೆಗೆ ರೈತರು ಮುಂದೆ ಬರುತ್ತಿಲ್ಲ. ಒಂದು ತಿಂಗಳಲ್ಲಿ ಕೇವಲ 10 ರೈತರು 431 ಕ್ವಿಂಟಾಲ್ ಭತ್ತ ಮಾರಾಟ ಮಾಡುವುದಾಗಿ ನೋಂದಣಿ ಮಾಡಿದ್ದಾರೆ. ಇದೇ ಹೊತ್ತಿನಲ್ಲಿ ಭತ್ತ ಮತ್ತು ಅಕ್ಕಿಯ ಬೆಲೆ ನಡುವೆ ಅಜಗಜಾಂತರವಿದ್ದು, ಸರಕಾರ ಬೆಂಬಲ ಬೆಲೆ ಇನ್ನಷ್ಟು ಹೆಚ್ಚಿಸಬೇಕು ಎಂಬ ಒತ್ತಡ ರೈತರಿಂದ ಕೇಳಿ ಬಂದಿದೆ.

ಬೆಂಬಲ ಬೆಲೆಯಿಂದ ರಾಜ್ಯದ ಭತ್ತ ಬೆಳೆಗಾರರಿಗೆ ಅಷ್ಟೇನೂ ಸಹಾಯಕವಾಗಿಲ್ಲ. ರಾಜ್ಯದ ಭತ್ತದ ಕೃಷಿಯಲ್ಲಿ ಶೇ. 70ರಷ್ಟು ಪ್ರದೇಶವನ್ನು ಸೋನಾ ಮಸೂರಿ ಭತ್ತವೇ ಆಕ್ರಮಿಸಿಕೊಂಡಿದೆ. ಆದರೆಲ್ಲೂ ದಾವಣಗೆರೆ ಜಿಲ್ಲೆಗೀಂತಾವರಿ ಪ್ರದೇಶದಲ್ಲಿ ಪೂರ್ಣ ಪ್ರಮಾಣದಲ್ಲಿ ಸೋನಾ ಮಸೂರಿ ಮತ್ತು ಶ್ರೀರಾಮ ಸೋನಾ ತಳಿಯ ಭತ್ತ ಬೆಳೆಯುವುದರಿಂದ ಇತ್ತೀಚಿನ ವರ್ಷಗಳಲ್ಲಿ ಬೆಂಬಲ ಬೆಲೆ ಎನ್ನುವುದು ನೆರವಿಗೆ ಬಂದಿಲ್ಲ. ಸೋನಾಮಸೂರಿ ಭತ್ತ ಮತ್ತು ಅಕ್ಕಿಗೆ ದಾವಣಗೆರೆ ಎಪಿಎಂಸಿ ಆವರಣದಲ್ಲಿ ಭತ್ತದ ರಾಶಿ.



ಮಾರುಕಟ್ಟೆಯಲ್ಲಿಯೇ ಬೆಂಬಲ ಬೆಲೆಗಿಂತ ಉತ್ತಮ ಬೆಲೆ ಇರುವುದರ ಜತೆಗೆ ಗುಣಮಟ್ಟದಲ್ಲೂ ಕೊಂಚ ರಾಜಿ ಆಗುವುದರಿಂದ ರೈತರು ಮಾರುಕಟ್ಟೆಯಲ್ಲಿಯೇ ಮಾರಾಟ ಮಾಡುತ್ತಿದ್ದಾರೆ.

ಈ ವರ್ಷ ಭತ್ತಕ್ಕೆ ಕ್ವಿಂಟಾಲ್‌ಗೆ ಮೊದಲ ಗುಣಮಟ್ಟಕ್ಕೆ 2,289 ರೂ. ಹಾಗೂ ಎರಡನೇ ಗುಣಮಟ್ಟಕ್ಕೆ 2,869 ರೂ. ನಿಗದಿ ಮಾಡಿದೆ. ಮಾರುಕಟ್ಟೆಯಲ್ಲಿ ಈಗ ಭತ್ತಕ್ಕೆ 2200 ರಿಂದ 2430 ರೂ.ವರೆಗೂ ಬೆಲೆಯಿದೆ. ಮೂರು ದಿನದ ಹಿಂದ 2,629 ರೂ. ಗರಿಷ್ಠ ದರ ದಾಖಲಾಗಿತ್ತು. ಪ್ರತಿದಿನ ನೂರು ರೂ. ವ್ಯತ್ಯಾಸ ಆಗುತ್ತಿದೆ. ಮಾರುಕಟ್ಟೆಯಲ್ಲಿಯೇ ಬೆಂಬಲ ಬೆಲೆಗಿಂತ ಹೆಚ್ಚು ಬೆಲೆ ಇರುವುದರಿಂದ ಮತ್ತು ಖರೀದಿ ಕೇಂದ್ರ ಬೇಡುವ ಪೂರ್ಣ ಒಣಗಿದ ಗುಣಮಟ್ಟದ ಭತ್ತಕ್ಕೆ ಎಪಿಎಂಸಿಯಲ್ಲಿಯೇ 2,500 ರೂ.ವರೆಗೂ ಬೆಲೆ ಸಿಗುವುದರಿಂದ [illegible] ರೈತರು ಹೇಳುತ್ತಾರೆ.

ಮಾರುಕಟ್ಟೆ ಬೆಲೆಯೂ ಹೆಚ್ಚಲಿದೆ!

'ಒಂದು ತಿಂಗಳ ಹಿಂದೆ ಭತ್ತಕ್ಕೆ ಕ್ವಿಂಟಾಲ್‌ಗೆ ಕೇವಲ 1,800 ರೂ.ನಿಂದ 2150 ರೂ. ಬೆಲೆಯಿತ್ತು. ಖರೀದಿ ಕೇಂದ್ರ ತೆರೆದ ತಕ್ಷಣ ಕ್ವಿಂಟಾಲ್ ಭತ್ತದ ಬೆಲೆ 2,400 ರೂ.ದಾಟಿದೆ. ಸರಕಾರ ಬೆಂಬಲ ಬೆಲೆಯನ್ನು ಇನ್ನೂ ಹೆಚ್ಚಿಸಿದರೆ ಮಾರುಕಟ್ಟೆಯಲ್ಲಿಯೂ ಬೆಲೆ ಹೆಚ್ಚು ಹುದು. ಜತೆಗೆ ಬೆಲೆ ಸ್ಥಿರತೆಗೂ ಅನುಕೂಲ ಆಗಲಿದೆ. ಹಾಗಾಗಿ 3 ಸಾವಿರಕ್ಕಿಂತ ಹೆಚ್ಚು ಬೆಂಬಲ ಬೆಲೆಯನ್ನು ಕೇಂದ್ರ ಸರಕಾರ ನಿಗದಿ ಪಡಿಸಬೇಕು, ರಾಜ್ಯ ಸರಕಾರ ಅರ್ತರ್ ನಿಧಿಯಲ್ಲಿ ಪ್ರೋತ್ಸಾಹಧನ ನೀಡಿದರೆ ರೈತನಿಗೆ ಉತ್ತಮ ಬೆಲೆ ಸಿಕ್ಕಂತಾಗುತ್ತದೆ' ಎಂದು ರೈತರು ಹೇಳುತ್ತಾರೆ.

Hosadiganta pg 11

ನರೇಗಾ ಮೂಲಕ ರೇಷ್ಮೆ ಕ್ಷೇತ್ರದಲ್ಲಿ ಬದಲಾವಣೆ | ಬೆಳೆಗಾರರಲ್ಲಿ ಮೂಡಿದ ಆಶಾಕಿರಣ

ರೇಷ್ಮೆ ಬೆಳೆಯಲ್ಲಿ ಯುವ ರೈತನ ಸಾಧನೆ

▸ ಪ್ರದೀಪ್ ದೊಡ್ಡಬಳ್ಳಾಪುರ

• **ದೊಡ್ಡಬಳ್ಳಾಪುರ:** ಸರ್ಕಾರದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ರೇಷ್ಮೆ ಇಲಾಖೆ ಸಮನ್ವಯದ ಪ್ರಯತ್ನದಿಂದ ತಾಲೂಕಿನಲ್ಲಿ ರೇಷ್ಮೆ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ಸಂಭವಿಸಿದೆ.

ರೈತರ ಜೀವನೋಪಾಯ ಬಲಪಡಿಸುವ ಜತೆಗೆ ಗ್ರಾಮೀಣ ಪ್ರದೇಶದಲ್ಲಿ ಶಾಶ್ವತ ಉದ್ಯೋಗಾವಕಾಶವನ್ನು ಸೃಷ್ಟಿಸುವ ನಿಟ್ಟಿನಲ್ಲಿ ಈ ಸಂಯುಕ್ತ ಪ್ರಯತ್ನ ಯಶಸ್ವಿಯಾಗಿದೆ.

ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಿಪ್ಪುನೇರಳೆ ತೋಟ ಸ್ಥಾಪನೆ ಮತ್ತು ನಿರ್ವಹಣೆ, ಮಣ್ಣು ಸಂರಕ್ಷಣೆ, ಪರಿಸರ ಹಸಿರೀಕರಣ ಮತ್ತು ಉದ್ಯೋಗ ಸೃಷ್ಟಿ ಸೇರಿದಂತೆ ಅನೇಕ ಚಟುವಟಿಕೆಯನ್ನು ನರೇಗಾ ಯೋಜನೆಯಲ್ಲಿ ಕೈಗೊಳ್ಳಲಾಗಿದೆ. ಇದರ ಮೂಲಕ ರೈತರ ಆರ್ಥಿಕ ಸ್ಥಿತಿ ಸುಧಾರಿಸಿದೆ. ಯುವ ರೈತರೂ ಈಗ ರೇಷ್ಮೆ ಕೃಷಿಯತ್ತ ಆಕರ್ಷಿತರಾಗಿದ್ದಾರೆ.

ಯಶಸ್ಸಿನ ಹಾದಿಯಲ್ಲಿ ಯುವ ರೈತ: ಅರಳುಮಲ್ಲಿಗೆ ಗ್ರಾಪಂ ವ್ಯಾಪ್ತಿಯ ಗ್ರಾಮದ ಮನೋಹರ್ ಬಿನ್ ಮುನಿಯಪ್ಪ ತಾಲೂಕಿನ ಯುವ ಪ್ರಗತಿಪರ ರೈತರಲ್ಲಿ ಒಬ್ಬರು. ಖಾಸಗಿ ಕಂಪನಿ ಕೆಲಸ ತೊರೆದು ಸ್ವಾವಲಂಬನೆ ಕನಸಿನಿಂದ ರೇಷ್ಮೆ ಕೃಷಿ ಆರಂಭಿಸಿದವರು. ಇಂದಿಗೆ ನರೇಗಾ ಯೋಜನೆ ಮತ್ತು ರೇಷ್ಮೆ ಇಲಾಖೆ ಸಹಾಯದಿಂದ ಮಾದರಿ ರೈತರಾಗಿದ್ದಾರೆ.

ಇವರು 1.5 ಎಕರೆ ಜಮೀನಿನಲ್ಲಿ ಹಿಪ್ಪುನೇರಳೆ ತೋಟ ಮಾಡಿ, ಅದರ 2ನೇ ಮತ್ತು 3ನೇ ವರ್ಷದ ನಿರ್ವಹಣಾ ಕಾಮಗಾರಿಯನ್ನು ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ. 2ನೇ ವರ್ಷದ ನಿರ್ವಹಣೆಗೆ 72,070 ಹಾಗೂ 3ನೇ ವರ್ಷದ ನಿರ್ವಹಣೆಗೆ 83,340 ಮಂಜೂರಾಗಿದೆ. ಒಟ್ಟು 552 ಮಾನವ ದಿನಗಳು ಸೃಜನೆಯಾಗಿವೆ. ಈ ಮೂಲಕ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗಾವಕಾಶ ಮತ್ತು ರೈತರಿಗೆ



ತೋಟದ ಸೌಕರ್ಯ ಎರಡೂ ಒಟ್ಟಿಗೆ ಒದಗಿಸಿದೆ. ಮನೋಹರ್ ಅವರು ರೇಷ್ಮೆ ಇಲಾಖೆ ಸಹಾಯಧನದಿಂದ 2.25 ಲಕ್ಷ ವೆಚ್ಚದಲ್ಲಿ ಆಧುನಿಕ ಹುಳು ಸಾಕಾಣಿಗೆ ಮನೆ ನಿರ್ಮಿಸಿಕೊಂಡಿದೆ. ಅದೇ ಇಲಾಖೆಯಿಂದ ಹನಿನೀರಾವರಿ ಅಳವಡಿಕೆಗೆ ಸಹ ಅನುದಾನ ಪಡೆದಿದ್ದಾರೆ. ಇದರಿಂದ ನೀರಿನ ಬಳಕೆ ನಿಯಂತ್ರಣ ಮತ್ತು ಉತ್ತಮ ಗುಣಮಟ್ಟದ ಸೊಪ್ಪು ಉತ್ಪಾದನೆ ಸಾಧ್ಯವಾಗಿದೆ.

ಸದರಿ ರೈತರು ಪ್ರತಿವರ್ಷ ಸರಾಸರಿ 8 ರೇಷ್ಮೆ ಬೆಳೆಗಳಿಂದ 4.5 ರಿಂದ 5 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ನರೇಗಾ ಯೋಜನೆ ಸಹಕಾರದಿಂದ ತೋಟದ ನಿರ್ವಹಣಾ ವೆಚ್ಚ ಕಡಿಮೆಯಾಗಿದೆ ಎಂದು ಸಂತಸ ತಂದಿದೆ ಎಂದಿದ್ದಾರೆ.

ಯೋಜನೆ ವ್ಯಾಪ್ತಿ ಮತ್ತು ಪರಿಣಾಮ: 2024-25 ಹಾಗೂ 2025-26ನೇ ಸಾಲಿನ ಪ್ರಗತಿ ವರದಿಯ ಪ್ರಕಾರ, ತಾಲೂಕಿನಲ್ಲಿ ನರೇಗಾ ಯೋಜನೆಯಡಿ ರೇಷ್ಮೆ ಇಲಾಖೆ ಸಹಕಾರದೊಂದಿಗೆ 117ಕ್ಕೂ ಹೆಚ್ಚು ರೈತರು ಪ್ರಯೋಜನ



ಪಡೆದುಕೊಂಡಿದೆ. ಸುಮಾರು 114 ಎಕರೆಯಲ್ಲಿ ಹಿಪ್ಪುನೇರಳೆ ತೋಟ ಅಭಿವೃದ್ಧಿಪಡಿಸಲಾಗಿದೆ. 2024-25ನೇ ಸಾಲಿನಲ್ಲಿ 13071ಹಾಗೂ 2025-26ನೇ ಸಾಲಿನಲ್ಲಿ 5623 ಮಾನವ ದಿನ ಸೃಜನೆಯಾಗಿವೆ. ಯೋಜನೆಯಲ್ಲಿ ನಡೆದ ಹಿಪ್ಪುನೇರಳೆ ತೋಟ ನಿರ್ವಹಣಾ ಕಾರ್ಯಗಳು ಪರಿಸರ ಹಸಿರೀಕರಣಕ್ಕೆ ಸಹ ಕೊಡುಗೆ ನೀಡಿದೆ. ಗ್ರಾಮೀಣ ಪ್ರದೇಶಗಳ ತೋಟಗಾರಿಕಾ ಭೂಮಿ ಗುಣಮಟ್ಟ ಸುಧಾರಿಸಿದೆ.

ಸಹಕಾರದಿಂದ ಬದಲಾವಣೆಯ ದಾರಿ: ನರೇಗಾ ಯೋಜನೆಯಲ್ಲಿ ರೇಷ್ಮೆ ಇಲಾಖೆಯು ನೀಡುತ್ತಿರುವ ತಾಂತ್ರಿಕ ಮಾರ್ಗದರ್ಶನ ಹಾಗೂ ಕಾರ್ಮಿಕ ವೇತನದ ಸಹಕಾರ, ಮತ್ತು ಇಲಾಖೆಯ ವಿಶೇಷ ಯೋಜನೆಯಲ್ಲಿ ನೀಡುವ ಸಹಾಯಧನಗಳು ಸೇರಿ ದೊಡ್ಡಬಳ್ಳಾಪುರ ತಾಲೂಕನ್ನು ರೇಷ್ಮೆ ಅಭ